**ಡಿ. ಡಬ್ಲ್ಯೂ - 01**

**ದಿನಾಂಕಃ06-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ವಾದಿಯ ಪರ ಶ್ರೀ. ಕೆ. ಜಿ. ಎನ್ , ವಕೀಲರಿಂದ:-**

1. ನಾನು ಎಸ್.ಎಸ್.ಎಲ್.ಸಿ ಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನನಗೆ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆಯನ್ನು ಸಾಧಾರಣಾವಾಗಿ ಓದಲು ಮತ್ತು ಬರೆಯಲು ಬರುತ್ತದೆ. ಪ್ರತಿವಾದಪತ್ರಕ್ಕೆ ನನ್ನ ವಕೀಲರು ಮಾಹಿತಿಯನ್ನು ನೀಡಿರುತ್ತಾರೆ. ಪ್ರತಿವಾದಪತ್ರದಲ್ಲಿ ಇರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ತಂದೆಯ ಹೆಸರು ರಂಗಪ್ಪ. ವಾದಿಯು ನನ್ನ ಅಣ್ಣನಾಗುತ್ತಾರೆ. ನಾನು ಮತ್ತು ವಾದಿಯನ್ನು ಹೊರತುಪಡಿಸಿ ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ವಾದಿಯು ಸರ್ಕಾರಿ ನೌಕರಿಯಲ್ಲಿ ಇದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯು ಸರ್ಕಾರಿ ನೌಕರನಾಗಿದ್ದರಿಂದ ಅವರು ಆರ್ಥಿಕವಾಗಿ ಸದೃಡವಾಗಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಇಬ್ಬರು ತಂಗಿಯರು ಯಾವ ದಿನಾಂಕದಂದು ಮದುವೆ ಆದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಮ್ಮ ತಂಗಿಯರ ಮದುವೆಯ ಪೂರ್ತಿ ಜವಾಬ್ದಾರಿಯನ್ನು ವಾದಿಯವರೇ ನೋಡಿಕೊಂಡಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**